# ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 12.

ಸಂಖ್ಯೆ: ಪಪೂಶಿಇ/ಪರೀಕ್ಷೆ/ಪೂ.ಪ.ಅ/2018–19. ದಿನಾಂಕ: 15.04.2019.

## ಸು ತ್ತೋ ಲೆ

ವಿಷಯ: ಮಾರ್ಚ್ 2019ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟಣೆ ಹಾಗೂ ಜೂನ್ 2019ರಲ್ಲಿ ನಡೆಯುವ ಪೂರಕ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಬಗ್ಗೆ.

* * * *

ಮಾರ್ಚ್–2019ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ 15.04.2019ರ ಬೆಳಿಗ್ಗೆ 11:00 ಗಂಟೆಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು ಹಾಗೂ ದಿನಾಂಕ 16.04.2019 ರಂದು ಬೆಳಿಗ್ಗೆ 11:00 ಗಂಟೆಗೆ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಕಟಿಸಲು ಸೂಚಿಸಿದೆ.

**ಪ್ರಕಟಿಸಲಾದ ಫಲಿತಾಂಶದಲ್ಲಿ ನ್ಯೂನತೆ ಹಾಗೂ ಜೂನ್–2019ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗಳ ಬಗ್ಗೆ ಪ್ರಾಂಶುಪಾಲರಿಗೆ ವಿಶೇಷ ಸೂಚನೆ:**

1. ದ್ವಿತೀಯ ಪಿಯುಸಿ ಪರೀಕ್ಷೆಗಳ ಫಲಿತಾಂಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಡಿ 465 ಡಿಜಿಡಬ್ಲ್ಯೂ 2016 (2) ದಿನಾಂಕ 25–03–2017ರ ಆದೇಶದ ಅನ್ವಯ **'ಕರ್ನಾಟಕ ಪ್ರೀ ಯೂನಿವರ್ಸಿಟಿ ಕೋರ್ಸ್ ಸ್ಟೇಟ್ ಲೆವೆಲ್ ಪರೀಕ್ಷೆ (ತಿದ್ದುಪಡಿ) ನಿಯಮಾವಳಿ 2017**ರ ರಂತೆ ದಿನಾಂಕ 15.04.2019 ರಂದು ಘೋಷಿಸಲಾಗಿದೆ.
2. ಪ್ರತಿ ಕಾಲೇಜಿಗೆ ಎಲ್ಲಾ ವಿದ್ಯಾರ್ಥಿಗಳ ಫಲಿತಾಂಶ ಪಟ್ಟಿಯನ್ನು ದ್ವಿಪ್ರತಿಯಲ್ಲಿ ಕಳುಹಿಸಿ ಕೊಡಲಾಗುತ್ತಿದೆ.
3. ಮಾರ್ಚ್–2019ರಲ್ಲಿ ನಡೆಸಿದ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗಿರುವ ವಿದ್ಯಾರ್ಥಿಗಳ ಪ್ರಕಟಿತ ಫಲಿತಾಂಶದಲ್ಲಿ ಏನಾದರೂ ನ್ಯೂನತೆ ಇದ್ದಲ್ಲಿ ದಿನಾಂಕ 25.04.2019 ರೊಳಗಾಗಿ ಸಂಬಂಧಿಸಿದ ಪರೀಕ್ಷಾ ಕೇಂದ್ರದ ಕೊಠಡಿ ಮೇಲ್ವಿಚಾರಕರ ದಿನಚರಿ, Marked Nominal Roll ಮತ್ತು ಇತರೆ ಪೂರಕ ದಾಖಲೆಗಳನ್ನು ಕೇಂದ್ರ ಕಛೇರಿಗೆ ಪ್ರಾಂಶುಪಾಲರೇ ಖುದ್ದಾಗಿ ಸಲ್ಲಿಸಿ ಫಲಿತಾಂಶವನ್ನು ಸರಿಪಡಿಸಿಕೊಳ್ಳುವಂತೆ ಸೂಚಿಸಿದೆ. ತದನಂತರ ಬಂದಂತಹ ಯಾವುದೇ ರೀತಿಯ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ, ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳನ್ನು / ಪೋಷಕರನ್ನು ಫಲಿತಾಂಶಕ್ಕೆ ಸಂಬಂಧಿಸಿದಂತೆ ಕೇಂದ್ರ ಕಛೇರಿಗೆ ಕಳುಹಿಸಬಾರದು. ಕಳುಹಿಸಿದಲ್ಲಿ ಮುಂದೆ ಸಂಭವಿಸಬಹುದಾದ ಆಗು–ಹೋಗುಗಳಿಗೆ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.
4. ಮಾರ್ಚ್–2019ರಲ್ಲಿ ನಡೆಸಿದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ **ಅನುತ್ತೀರ್ಣರಾದ ವಿದ್ಯಾರ್ಥಿಗಳಿಂದ ಜೂನ್** 2019ರಲ್ಲಿ ನಡೆಸುವ ಪೂರಕ ಪರೀಕ್ಷೆಗೆ ಶುಲ್ಕ ಕಟ್ಟಿಸಿಕೊಳ್ಳಲು **ಅನುತ್ತೀರ್ಣ ಓಎಂಆರ್ ಅರ್ಜಿಗಳಿಗಾಗಿ ಕಾಯಬೇಕಾದ ಅವಶ್ಯಕತೆ ಇಲ್ಲ.** ಫಲಿತಾಂಶ ಪಟ್ಟಿ ಆಧಾರದ ಮೇರೆಗೆ ಅನುತ್ತೀರ್ಣ ವಿಷಯಗಳಿಗೆ ನಿಯಮಾನುಸಾರ ಪರೀಕ್ಷಾ ಶುಲ್ಕ ಕಟ್ಟಿಸಿಕೊಳ್ಳುವುದು. ಅನುತ್ತೀರ್ಣ ಓಎಂಆರ್ ಅರ್ಜಿಗಳು ಕಾಲೇಜಿಗೆ ತಲುಪಿದ ಕೂಡಲೇ ಶುಲ್ಕಕಟ್ಟಿದ ಅಭ್ಯರ್ಥಿಗಳ ಓಎಂಆರ್ ಅರ್ಜಿಗಳನ್ನು ಭರ್ತಿಮಾಡಿ ಇಲಾಖೆಯ Online Portal ನಲ್ಲಿ ತುಂಬಿದ ನಂತರ ಉಪನಿರ್ದೇಶಕರ ಕಛೇರಿಗೆ ಒಂದೇ ಕಂತಿನಲ್ಲಿ ಸಲ್ಲಿಸುವುದು.
5. ಜುಲೈ–2018ರ ದ್ವಿತೀಯ ಪಿಯುಸಿ ಪರೀಕ್ಷೆ ಹಾಗೂ ಅದಕ್ಕೂ ಹಿಂದಿನ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಂದ ಮೂಲ ಓಎಂಆರ್ / ಅನುತ್ತೀರ್ಣ ಅರ್ಜಿ ಅಥವಾ ಹಿಂದಿನ ಎಂ.ಸಿ.ಎ. (MARKS CARD CUM APPLICATION) ಗಳ ಆಧಾರದ ಮೇಲೆ ಪರೀಕ್ಷಾ ಶುಲ್ಕಗಳನ್ನು ಕಟ್ಟಿಸಿಕೊಂಡು ಇಲಾಖಾ Online Portal ನಲ್ಲಿ ವಿದ್ಯಾರ್ಥಿಗಳ ಮಾಹಿತಿಯನ್ನು ತುಂಬುವುದು.
6. ಮಾರ್ಚ್–2019ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ <u>ಅನುತ್ತೀರ್ಣರಾದ</u> ವಿದ್ಯಾರ್ಥಿಗಳು ನಿಯಮಾನುಸಾರ ಫಲಿತಾಂಶ ತಿರಸ್ಕರಿಸಿ ಪರೀಕ್ಷೆ ಬರೆಯಲು ಇಚ್ಛಿಸಿದಲ್ಲಿ, ಮೂಲ ಅನುತ್ತೀರ್ಣ ಓಎಂಆರ್‌ಗಳನ್ನು ಪಡೆದುಕೊಂಡ ನಂತರವೇ ಕ್ರಮವಹಿಸುವುದು. ಶುಲ್ಕಗಳ ಬಗ್ಗೆ ಫಲಿತಾಂಶ ತಿರಸ್ಕರಣೆ ಅರ್ಜಿಯ ಹಿಂಬದಿಯಲ್ಲಿನ ಸೂಚನೆಗಳನ್ನು ಗಮನಿಸುವುದು
7. ಮಾರ್ಚ್–2018 ಹಾಗೂ ಜುಲೈ–2018ರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಫಲಿತಾಂಶ ತಿರಸ್ಕರಿಸಿ ಜೂನ್ 2019ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ಬರೆಯಲು ಇಚ್ಛಿಸಿದ್ದಲ್ಲಿ, ಅಂತಹ ವಿದ್ಯಾರ್ಥಿಗಳ **ಮೂಲ ಅಂಕಪಟ್ಟಿಗಳ** (Original Marks Card) ಆಧಾರದ ಮೇಲೆ ನಿಯಮಾನುಸಾರ ಫಲಿತಾಂಶ ತಿರಸ್ಕರಣೆಗೆ ಅವಕಾಶ ನೀಡುವುದು ಹಾಗೂ Online Portal ನಲ್ಲಿ ಮಾಹಿತಿಗಳನ್ನು ದಾಖಲಿಸುವುದು.

8. ಸರ್ಕಾರದ ಆದೇಶ ಸಂಖ್ಯೆ ಇಡಿ 195 ಡಿಜಿಡಿ 2017 ಬೆಂಗಳೂರು ದಿನಾಂಕ: 20.03.2018 ರಂತೆ ಪರೀಕ್ಷಾ ಶುಲ್ಕ ಹಾಗೂ ಫಲಿತಾಂಶ ತಿರಸ್ಕರಣಾ ಶುಲ್ಕ ಹಾಗೂ ದಂಡ ಶುಲ್ಕಗಳನ್ನು ಪರಿಷ್ಕರಿಸಿದೆ.

**ಜೂನ್-2019ರಲ್ಲಿ ನಡೆಸಲಾಗುವ ಪೂರಕ ಪರೀಕ್ಷೆಗೆ ಅನುತ್ತೀರ್ಣ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕ ಮತ್ತು ಫಲಿತಾಂಶ ತಿರಸ್ಕರಣಾ ಶುಲ್ಕಗಳ ವಿವರ:**

| **ಪರೀಕ್ಷಾ ಶುಲ್ಕ (ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಪ್ರವರ್ಗ-1ರ ವಿದ್ಯಾರ್ಥಿಗಳನ್ನು ಹೊರತು ಪಡಿಸಿ)** | |
|---|---|
| ಒಂದು ವಿಷಯಕ್ಕೆ | ರೂ 140/- |
| ಎರಡು ವಿಷಯಕ್ಕೆ | ರೂ 270/- |
| ಮೂರು ಅಥವಾ ಹೆಚ್ಚಿನ ವಿಷಯಗಳು | ರೂ 400/- |
| ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಪ್ರವರ್ಗ-1ರ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಂದ ಕಡ್ಡಾಯವಾಗಿ ಸಲ್ಲಿಸಬೇಕಾದ ಅಂಕಪಟ್ಟಿ ಶುಲ್ಕ | ರೂ 50/- |

| **ಫಲಿತಾಂಶ ತಿರಸ್ಕರಣಾ ಶುಲ್ಕ** | |
|---|---|
| ಪ್ರಥಮ ಬಾರಿಗೆ ಒಂದು ವಿಷಯಕ್ಕೆ | ರೂ 175/- |
| ದ್ವಿತೀಯ ಹಾಗೂ ಅಂತಿಮ ಬಾರಿಗೆ ಒಂದು ವಿಷಯಕ್ಕೆ | ರೂ 350/- |

**ಜೂನ್-2019ರಲ್ಲಿ ನಡೆಸುವ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಅನುತ್ತೀರ್ಣ ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕಗಳು**

| ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿಸಲು ಹಾಗೂ (ಅನುತ್ತೀರ್ಣ ಮತ್ತು ಫಲಿತಾಂಶ ತಿರಸ್ಕರಿಸಿದ ವಿದ್ಯಾರ್ಥಿಗಳ ಮಾಹಿತಿಯನ್ನು) Online Portal ನಲ್ಲಿ Update ಮಾಡಲು ಕಡೇ ದಿನಾಂಕ | ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಒಂದೇ ಕಂತಿನಲ್ಲಿ ಖಜಾನೆಗೆ ಸಂದಾಯ ಮಾಡಬೇಕಾದ ದಿನಾಂಕ | ಕಾಲೇಜಿನವರು ಪರೀಕ್ಷಾ ಅರ್ಜಿಗಳನ್ನು ಮೂಲ ಚಲನ್ ಸಹಿತ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕಾದ ದಿನಾಂಕ |
|---|---|---|
| **30.04.2019** | **02.05.2019** | **04.05.2019** |

ಜಿಲ್ಲಾ ಉಪನಿರ್ದೇಶಕರು ಪ್ರಾಂಶುಪಾಲರಿಂದ ಸ್ವೀಕರಿಸಿದ ಪರೀಕ್ಷಾ ಅರ್ಜಿಗಳನ್ನು Online Portal ನಲ್ಲಿ Update ಮಾಡಿರುವುದನ್ನು ಖಾತ್ರಿ ಪಡಿಸಿಕೊಂಡು ಪ್ರಾಂಶುಪಾಲರಿಂದ Update ಮಾಡಿರುವುದಕ್ಕೆ ಸಂಬಂಧಿಸಿದಂತೆ ಮುಚ್ಚಳಿಕೆ ಪತ್ರ ಪಡೆದ ನಂತರ ಕಾಲೇಜುವಾರು ಕ್ರೋಢಿಕೃತ ವಿದ್ಯಾರ್ಥಿಗಳ ಪಟ್ಟಿ, ಹಣ ಪಾವತಿಸಿರುವ ಮೂಲ ಚಲನ್ ಹಾಗೂ ಮುಚ್ಚಳಿಕೆ ಪತ್ರವನ್ನು ಖುದ್ದಾಗಿ ಕೇಂದ್ರ ಕಛೇರಿಗೆ ಸಲ್ಲಿಸಬೇಕಾದ ದಿನಾಂಕ **06.05.2019.**

**ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯನ್ನು ದಿನಾಂಕ07-06-2019 ರಿಂದ 18-06-2019 ರವರೆಗೆ ನಡೆಸಲಾಗುವುದರಿಂದ ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.**

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರಿಗೆ - ಮಾಹಿತಿಗಾಗಿ ಹಾಗೂ ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.
2. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ. (ವಿದ್ಯಾರ್ಥಿಗಳಿಗೆ ಈ ಕುರಿತು ಸೂಕ್ತ ನಿರ್ದೇಶನ ನೀಡಲು)
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ.
4. ಗಣಕ ಶಾಖೆಗೆ.
5. ಇಲಾಖಾ ಇ-ಆಡಳಿತ ಶಾಖೆ, (ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು).
6. ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 012.

ಸಂಖ್ಯೆ: ಪಪೂಶಿಇ/ಪರೀಕ್ಷೆ/SC.RV.RT/2018-19 ದಿನಾಂಕ: 15.04.2019

**ಸುತ್ತೋಲೆ**

**ವಿಷಯ:** ಮಾರ್ಚ್ 2019ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳ Scanned ಪ್ರತಿ ಪಡೆಯಲು, ಮರುಮೌಲ್ಯಮಾಪನ ಮತ್ತು ಮರುಎಣಿಕೆಗಾಗಿ ಅರ್ಜಿ ಸಲ್ಲಿಸುವ ಬಗ್ಗೆ.

* * * *

'ಕರ್ನಾಟಕ ಪ್ರೀ ಯೂನಿವರ್ಸಿಟಿ ಕೋರ್ಸ್ ಸ್ಟೇಟ್ ಲೆವೆಲ್ ಪರೀಕ್ಷೆ ನಿಯಮಾವಳಿ 1997'ರ ನಿಯಮ 29(1) ಹಾಗೂ 30(1)ರ ಪ್ರಕಾರ ದ್ವಿತೀಯ ಪಿಯುಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ Scanned ಪ್ರತಿ ಪಡೆಯಲು, ಮರುಎಣಿಕೆ ಹಾಗೂ ಮರುಮೌಲ್ಯಮಾಪನಕ್ಕಾಗಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಈ ಸಂಬಂಧ ಮಾರ್ಚ್ 2019ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು **online** ನಲ್ಲಿ **ಮಾತ್ರ** ತಮ್ಮ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ.

**ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆ:**

1. ವಿದ್ಯಾರ್ಥಿಗಳು ಉತ್ತರಪತ್ರಿಕೆಯ Scanned Copyಗೆ ಅರ್ಜಿ ಸಲ್ಲಿಸಿದ / ಪಡೆದ ವಿಷಯಗಳಿಗೆ ಮಾತ್ರ ನಂತರದಲ್ಲಿ Re-valuation /Re-totallingಗಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ ಹಾಗೂ Revaluationಗೆ ಅರ್ಜಿ ಸಲ್ಲಿಸಿರುವ ವಿಷಯಗಳಿಗೆ Re-totallingಗೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.
2. **ಅಂಚೆ, ಕೊರಿಯರ್, ಮುದ್ದಾಂ ಮತ್ತು ಇತರ ಯಾವುದೇ ವಿಧದಲ್ಲಿ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.**
3. ನಿಗದಿಪಡಿಸಲಾಗಿರುವ ಶುಲ್ಕವನ್ನು online ಮೂಲಕ **BENGALURU-ONE, KARNATAKA-ONE, CORPORATION BANK** ಹಾಗೂ **SYNDICATE BANK** ಗಳ ಯಾವುದೇ ಶಾಖೆಯ ಮೂಲಕ ಪಾವತಿ ಮಾಡಲು ಮಾತ್ರ ಅವಕಾಶವಿರುತ್ತದೆ.
4. ಸರ್ಕಾರದ ಆದೇಶ ಸಂಖ್ಯೆ ಇಡಿ 195 ಡಿಜಿಡಿ 2017 ಬೆಂಗಳೂರು ದಿನಾಂಕ: 20.03.2018 ರಂತೆ Scanned Copy ಹಾಗೂ ಮರುಮೌಲ್ಯಮಾಪನದ ಶುಲ್ಕವನ್ನು ಪರಿಷ್ಕರಿಸಿ ಆದೇಶಿಸಲಾಗಿದೆ.

**ಶುಲ್ಕಗಳ ವಿವರ**

| | | |
|---|---|---|
| Scanned Copy ಗಾಗಿ ಅರ್ಜಿ ಸಲ್ಲಿಸಲು | ಪ್ರತಿ ವಿಷಯಕ್ಕೆ | ರೂ 530/- |
| ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲು | ಪ್ರತಿ ವಿಷಯಕ್ಕೆ | ರೂ 1670/- |
| ಅಂಕಗಳ ಮರು ಎಣಿಕೆಗಾಗಿ | **ಯಾವುದೇ ಶುಲ್ಕ ಇರುವುದಿಲ್ಲ** | |

**ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಸಮಯ / ದಿನಾಂಕ**

| ಪ್ರಕ್ರಿಯೆಯ ವಿವರ | ರಿಂದ | ವರೆಗೆ |
|---|---|---|
| Scanned Copy ಗಾಗಿ ಅರ್ಜಿ ಸಲ್ಲಿಸಲು | 17.04.2019 | 29.04.2019 |
| Scanned Copy ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ ಮತ್ತು ಕೊನೆಯ ದಿನಾಂಕ | 27.04.2019 | 06.05.2019 |
| ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲು ಹಾಗೂ ಮರುಎಣಿಕೆಗಾಗಿ ಅರ್ಜಿ ಸಲ್ಲಿಸಲು (Scanned ಪ್ರತಿ ತೆಗೆದುಕೊಂಡವರಿಗೆ ಮಾತ್ರ ಅವಕಾಶವಿರುತ್ತದೆ). | 29.04.2019 | 08.05.2019 |

## Answer Paper Scanned Copy ಪಡೆಯಲು ಅರ್ಜಿ ಸಲ್ಲಿಸುವ ವಿಧಾನ

1. ಇಲಾಖೆಯ ವೆಬ್‌ಸೈಟ್ pue.kar.nic.in ರಲ್ಲಿನ HOME ಪೇಜ್‌ನಲ್ಲಿ Link (Application for Scanned copies, Re-valuation, Re-totalling March 2019) ಎಂದು ಇರುತ್ತದೆ.
2. Link ಕ್ಲಿಕ್ **ಮಾಡಿದರೆ** Calendar of Events **ಪುಟ ತೆರೆಯುತ್ತದೆ.** ಇದರಲ್ಲಿ "How to Apply" ಇದನ್ನು **ಕಡ್ಡಾಯವಾಗಿ ಪೂರ್ಣವಾಗಿ ಗಮನಿಸಬೇಕು.**
3. ತದನಂತರ "Online Application" ಬಟನ್ ಕ್ಲಿಕ್ ಮಾಡಬೇಕು.
4. ಈಗ "Application for scan copy" ಬಟನ್ ಕ್ಲಿಕ್ ಮಾಡಬೇಕು.
5. ಇದರಲ್ಲಿ ದ್ವಿತೀಯ ಪಿಯುಸಿ ಮಾರ್ಚ್–2019ರ ವಾರ್ಷಿಕ ಪರೀಕ್ಷೆಯ ನೋಂದಣಿ ಸಂಖ್ಯೆ (Register Number)ನ್ನು ಪ್ರವೇಶ ಪತ್ರದಲ್ಲಿರುವಂತೆ ನಮೂದಿಸಬೇಕು. ತಕ್ಷಣವೇ ವಿದ್ಯಾರ್ಥಿಗಳ ಮಾಹಿತಿ display ಆಗುತ್ತದೆ.
6. Answer Paper Scanned Copy ಪಡೆಯಲು ಇಚ್ಛಿಸಿದ ವಿಷಯ / ವಿಷಯಗಳನ್ನು **ಒಂದೇ ಬಾರಿಗೆ** ಆಯ್ಕೆ ಮಾಡಿಕೊಂಡು **ವಿದ್ಯಾರ್ಥಿಯ / ಪೋಷಕರ ನಿಖರವಾದ ಮೊಬೈಲ್ ಸಂಖ್ಯೆ, ತಮ್ಮ ಖಾಸಗಿ ಇ–ಮೈಲ್ ಐಡಿ** (Email Id) **ಹಾಗೂ ಸ್ವವಿಳಾಸಗಳನ್ನು** ಮಾತ್ರ ನಮೂದಿಸಬೇಕು. ನಂತರ Submit ಬಟನ್ ಕ್ಲಿಕ್ ಮಾಡಬೇಕು. ನಂತರ ಚಲನ್ ಸಂಖ್ಯೆಯು Auto Generate ಆಗುತ್ತದೆ
7. "Make Payment" ಬಟನ್ ಕ್ಲಿಕ್ ಮಾಡಬೇಕು, ಇಲ್ಲಿ "cash payment" ಅಥವಾ "online payment" ಆಯ್ಕೆ ಮಾಡಿಕೊಳ್ಳಬೇಕು.

**Cash payment ಆಯ್ಕೆ ಮಾಡಿಕೊಂಡರೆ**

- **ಬ್ಯಾಂಕ್ CORPORATION BANK / SYNDICATE BANK** ಹಾಗೂ **BENGALURU-ONE/ KARNATAKA-ONE,** ಆಯ್ಕೆಮಾಡಿಕೊಳ್ಳಿ.
- "Generate Challan" ಬಟನ್ ಕ್ಲಿಕ್ ಮಾಡಬೇಕು.
- **ಚಲನ್‌ನಲ್ಲಿ ತಾವು ದಾಖಲಿಸಿದ ಮಾಹಿತಿ** display ಆಗುತ್ತದೆ. ನಂತರ ಚಲನ್ ಪ್ರಿಂಟ್ ತಗೆದುಕೊಳ್ಳುವುದು.
- **ಆಯ್ಕೆಮಾಡಿದ ಬ್ಯಾಂಕ್‌ನ** ಚಲನ್ **ಪ್ರಿಂಟ್** ತಗೆದುಕೊಂಡ ನಂತರ ಚಲನ್ ಮುಖಾಂತರ ಹಣ ಸಂದಾಯ ಮಾಡುವುದು.
- **Cash Payment ಮುಖಾಂತರ ಹಣ ಸಂದಾಯ ಮಾಡಿದ 3 ರಿಂದ 4 ಗಂಟೆಗಳ ನಂತರ ತಾವು ನಮೂದಿಸುವ ಮೊಬೈಲ್ ಸಂಖ್ಯೆಗೆ SMS ಸಂದೇಶ ಬರುತ್ತದೆ.**

**On-line Payment ಆಯ್ಕೆ ಮಾಡಿಕೊಂಡರೆ**

- Karnataka-one ಬಟನ್ ಕ್ಲಿಕ್ ಮಾಡಬೇಕು.
- **ತಾವು ದಾಖಲಿಸಿದ ಮಾಹಿತಿ** display ಆಗುತ್ತದೆ.
- "Pay Now" ಬಟನ್ ಕ್ಲಿಕ್ ಮಾಡಬೇಕು
- Karnataka-one **ಪುಟದಲ್ಲಿ** Continue for Payment **ಆಯ್ಕೆಮಾಡಿ.**
- ಇದರಲ್ಲಿ "Terms and Conditions" **ಕಡ್ಡಾಯವಾಗಿ** ಓದಿ "Check box" ಕ್ಲಿಕ್ ಮಾಡಿ.
- "Continue for payment" ಕ್ಲಿಕ್ ಮಾಡಿ.
- ನಂತರ "Pay now" ಕ್ಲಿಕ್ ಮಾಡಿ.
- "Processing" **ಆಗುವವರೆಗೆ** "Back button" / "Close button" **ಅಥವಾ** "Refresh button" **ಒತ್ತಬೇಡಿ.**
- "Cash Payment" **ಅಥವಾ** "On-line payment" **ಮುಖಾಂತರ ಹಣ ಸಂದಾಯ ಮಾಡಿದ ನಂತರ ತಾವು ನಮೂದಿಸಿದ ಮೊಬೈಲ್ ಸಂಖ್ಯೆಗೆ** sms **ಸಂದೇಶ ಬರುತ್ತದೆ.**
- **sms ಸಂದೇಶ ಬಾರದಿದ್ದಲ್ಲಿ ಹಣ ಸಂದಾಯಿಸಿದ ಬ್ಯಾಂಕ್ B-one K-oneನ್ನು**

8. Scanned Copy ಗೆ Apply ಮಾಡಿದ ಕೂಡಲೇ Challan Generate ಆಗುತ್ತದೆ. ವಿದ್ಯಾರ್ಥಿಯು ಅದೇ ಚಲನ್ ಸಂಖ್ಯೆಯನ್ನು ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಉಪಯೋಗಿಸುವಂತಿಲ್ಲ. ಮರುಮೌಲ್ಯಮಾಪನಕ್ಕೆ ಪ್ರತ್ಯೇಕ Challan Generate ಮಾಡಿಕೊಳ್ಳಬೇಕು.
9. Scanned ಪ್ರತಿಗೆ ಮತ್ತು ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವಾಗ **ವಿದ್ಯಾರ್ಥಿಗಳು / ಪೋಷಕರು ಅವರ ಚಾಲ್ತಿಯಲ್ಲಿರುವ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.** ಇಲಾಖೆಯು ಅದೇ ದೂರವಾಣಿ ಸಂಖ್ಯೆಗೆ OTP (One Time Password) ಕಳುಹಿಸುತ್ತದೆ. ಆದ್ದರಿಂದ ಎಚ್ಚರ ವಹಿಸಿ ತಮ್ಮ ಮೊಬೈಲ್ ಸಂಖ್ಯೆಯನ್ನು ಮಾತ್ರ ನೀಡುವುದು. ಮೊಬೈಲ್ ಸಂಖ್ಯೆಯನ್ನು ತಪ್ಪಾಗಿ ಅಥವಾ ಚಾಲನೆಯಲ್ಲಿಲ್ಲದ ಅಥವಾ ಬೇರೆಯವರ ಮೊಬೈಲ್ ಸಂಖ್ಯೆಯನ್ನು ನೀಡಿದಲ್ಲಿ ಆಗುವ ಸಮಸ್ಯೆಗಳಿಗೆ ಇಲಾಖೆ ಜವಾಬ್ದಾರಿಯಾಗುವುದಿಲ್ಲ. ಇದಲ್ಲದೆ ಸದರಿ ದೂರವಾಣಿ ಸಂಖ್ಯೆ ಈ ಪ್ರಕ್ರಿಯೆ ಮುಕ್ತಾಯವಾಗುವವರೆಗೆ ಚಾಲನೆಯಲ್ಲಿರತಕ್ಕದ್ದು.
10. ವಿದ್ಯಾರ್ಥಿಯ ಪ್ರತಿ, ಮತ್ತು ಬ್ಯಾಂಕ್ ಪ್ರತಿಗಳನ್ನೊಂಡ ಎರಡು ಭಾಗಗಳಿರುವ ಚಲನ್ ಡೌನ್‌ಲೋಡ್ ಮಾಡಿಕೊಂಡು ನಿಗದಿಪಡಿಸಿರುವ ಶುಲ್ಕವನ್ನು ಆಯ್ಕೆ ಮಾಡಿಕೊಂಡಿರುವ ಬ್ಯಾಂಕ್ ಮುಖಾಂತರ ಪಾವತಿ ಮಾಡಬೇಕು. (Challan ಸಂಖ್ಯೆಯನ್ನು ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೂ ಬಳಸಿಕೊಳ್ಳಬೇಕಾಗಿರುವುದರಿಂದ ಅಭ್ಯರ್ಥಿಗಳು ಈ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಳ್ಳುವುದು)
11. **Scanned ಉತ್ತರ ಪತ್ರಿಕೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ UPLOAD ಮಾಡಿದ ಕೂಡಲೇ ವಿದ್ಯಾರ್ಥಿಯು ಒದಗಿಸಿರುವ ಮೊಬೈಲ್ ಸಂಖ್ಯೆಗೆ ಸಂದೇಶ ರವಾನೆಯಾಗುತ್ತದೆ.**
12. Scanned ಉತ್ತರ ಪತ್ರಿಕೆಯ UPLOAD ಮಾಡಲಾದ ಮಾಹಿತಿ ಇಲಾಖಾ ವೆಬ್‌ಸೈಟ್‌ನಲ್ಲಿ ಸಹ ಲಭ್ಯವಿರುತ್ತದೆ.
13. ಸಂದೇಶ ಸ್ವೀಕರಿಸಿದ ವಿದ್ಯಾರ್ಥಿಗಳು ಈ ಮೊದಲೇ ನೀಡಲಾದ ಚಲನ್ ಸಂಖ್ಯೆಯನ್ನು ಬಳಸಿ Answer Paper ನ Scanned Copy ಯನ್ನು ನಿಗದಿ ಪಡಿಸಲಾದ ದಿನಾಂಕದೊಳಗೆ ಡೌನ್–ಲೋಡ್ ಮಾಡಿಕೊಳ್ಳಬೇಕು.
14. **Answer Paper ನ Scanned Copy ಯನ್ನು ಡೌನ್–ಲೋಡ್ ಮಾಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳು:–**
    - Scanned Copy ಗಾಗಿ ಶುಲ್ಕ ಪಾವತಿಸಿರುವ ಚಲನ್ ಸಂಖ್ಯೆಯನ್ನು Enter ಮಾಡಬೇಕು.
    - ನಂತರ ವಿದ್ಯಾರ್ಥಿಯ ನೋಂದಣಿ ಸಂಖ್ಯೆ ಮತ್ತು ಶುಲ್ಕ ಪಾವತಿಸಿರುವ ವಿಷಯಗಳು Display ಆಗುತ್ತವೆ. ಬೇಕಾದ ಭಾಷೆ / ವಿಷಯವನ್ನು (Subject) ಆಯ್ಕೆ ಮಾಡಿಕೊಳ್ಳಬೇಕು.
    - ನಂತರ ಕ್ಯಾಪ್ಚಾ (Captcha) Code Enter ಮಾಡಿ Submit ಮಾಡಬೇಕು.
    - Submit ಮಾಡಿದ ನಂತರ ನೀವು Scanned copy ಗೆ Apply ಮಾಡುವಾಗ ನೀಡಿರುವ ಮೊಬೈಲ್ ದೂರವಾಣಿ ಸಂಖ್ಯೆಗೆ OTP ಕಳುಹಿಸಲಾಗುವುದು.
    - ಸದರಿ ಸಂಖ್ಯೆಯನ್ನೇ ಬಳಸಿ Scanned Copy ಡೌನ್–ಲೋಡ್ **ಮಾಡಿಕೊಳ್ಳಬೇಕು.**
    - Scanned copy ಗೆ Apply ಮಾಡುವಾಗ **ಚಾಲನೆಯಲ್ಲಿರುವ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಮಾತ್ರ ಉಪಯೋಗಿಸತಕ್ಕದ್ದು.**

**ಅಂಕಗಳ ಮರು ಎಣಿಕೆ ಹಾಗೂ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನಕ್ಕಾಗಿ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 08.05.2019**

**II. <u>ಮರು ಎಣಿಕೆಗಾಗಿ (Re-totalling) ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ಕ್ರಮ:–</u>**

1. Answer Paper Scanned Copy ಯನ್ನು ಪಡೆದುಕೊಂಡು ಪರಿಶೀಲಿಸಿದ ನಂತರ ಅಂಕಗಳ ಎಣಿಕೆಯಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಮಾತ್ರ ಮರು ಎಣಿಕೆಗಾಗಿ (Re-totalling) ಅರ್ಜಿ ಸಲ್ಲಿಸಬೇಕು
2. (Re-totalling) ಗೆ ಅರ್ಜಿ ಸಲ್ಲಿಸಲು ಶುಲ್ಕ ಪಾವತಿಸುವಂತಿಲ್ಲ.
3. Answer Paper Scanned Copy ಪಡೆಯಲು ಅನುಸರಿಸಿದ ಕ್ರಮವನ್ನೇ ಮರುಮೌಲ್ಯಮಾಪನಕ್ಕೂ ಅನುಸರಿಸುವುದು. ಆದರೆ ಮರುಎಣಿಕೆಗೆ ಚಲನ್ ಡೌನ್‌ಲೋಡ್ ಮಾಡುವ ಅವಶ್ಯಕತೆ ಇರುವುದಿಲ್ಲ. ಮುಂದಿನ ಉಪಯೋಗಕ್ಕಾಗಿ ಮತ್ತು ವಿದ್ಯಾರ್ಥಿಯ ಮಾಹಿತಿಗಾಗಿ ಚಲನ್ ಸಂಖ್ಯೆಯನ್ನು ವಿದ್ಯಾರ್ಥಿಯು ಒದಗಿಸಿದ ಮೊಬೈಲ್ ದೂರವಾಣಿ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ಕಳುಹಿಸಲಾಗುವುದು.

(6)

4. ಮರುಎಣಿಕೆ ಫಲಿತಾಂಶವನ್ನು ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.
5. ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿರುವವರು ಮರು ಎಣಿಕೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

III. <u>ಮರು ಮೌಲ್ಯಮಾಪನಕ್ಕಾಗಿ (Re-valuation) ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ಕ್ರಮ:–</u>

1. Answer Paper Scanned Copy ಯನ್ನು ಪಡೆದುಕೊಂಡು ಪರಿಶೀಲಿಸಿದ ನಂತರವೇ ಮರು ಮೌಲ್ಯಮಾಪನಕ್ಕಾಗಿ (Re-valuation) ಅರ್ಜಿ ಸಲ್ಲಿಸಬೇಕು.
2. ಮರುಮೌಲ್ಯಮಾಪನದಲ್ಲಿ ನಿಗದಿಪಡಿಸಿರುವ ಅಂಕಗಳಿಗಿಂತ ಹೆಚ್ಚಿನ ಅಂಕಗಳು ಅಥವಾ ಕಡಿಮೆ ಅಂಕಗಳು (–/+6%) ಬಂದಲ್ಲಿ ಬದಲಾವಣೆಯಾದ ಅಂಕಗಳೊಂದಿಗೆ ಫಲಿತಾಂಶವನ್ನು ಪರಿಷ್ಕರಿಸಿ ಪ್ರಕಟಿಸಲಾಗುವುದು. Karnataka Pre-University Course S.L.P.E. Rule-1997, 29 (ಅ) **ಅನ್ವಯ ಯಾವುದೇ** ಕಾರಣಕ್ಕೂ ವಿದ್ಯಾರ್ಥಿಗೆ ಈ ಮೊದಲು ಪಡೆದ ಅಂಕಗಳನ್ನು ಮರುಸ್ಥಾಪಿಸಲು ಅವಕಾಶವಿರುವುದಿಲ್ಲ.
3. ಮರುಮೌಲ್ಯಮಾಪನದಲ್ಲಿ (–/+6%) ಅಂಕಗಳಿಗಿಂತ ಕಡಿಮೆ ಅಂಕಗಳು ಬಂದಲ್ಲಿ ಸದರಿ ಅಂಕಗಳನ್ನು ಪರಿಗಣಿಸುವುದಿಲ್ಲ ಹಾಗೂ ಫಲಿತಾಂಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
4. ಮರು ಮೌಲ್ಯಮಾಪನದ ಬಗ್ಗೆ ಮರು ಮೌಲ್ಯಮಾಪಕರು ತೆಗೆದುಕೊಂಡ ನಿರ್ಧಾರವೇ ಅಂತಿಮವಾಗಿದ್ದು, ಇದರ ಮೇಲೆ ಮರು ಪರಿಶೀಲನೆ ಅಥವಾ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ.
5. Answer Paper Scanned Copy ಪಡೆಯಲು ಅನುಸರಿಸಿದ ಕ್ರಮವನ್ನೇ ಮರುಮೌಲ್ಯಮಾಪನಕ್ಕೂ (Re-valuation) ಅನುಸರಿಸುವುದು.
6. ಮರು ಮೌಲ್ಯಮಾಪನ / ಮರುಎಣಿಕೆ ಕಾರ್ಯ ಮುಗಿದ ನಂತರ ಫಲಿತಾಂಶವನ್ನು ಇಲಾಖೆಯ website <u>pue.kar.nic.in</u>ನ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.
7. ಮರು ಮೌಲ್ಯಮಾಪನ / ಮರು ಎಣಿಕೆಗೆ ಅರ್ಜಿ ಸಲ್ಲಿಸಿರುವ ಅನುತ್ತೀರ್ಣ ವಿದ್ಯಾರ್ಥಿಗಳು ಮೇ/ಜೂನ್ 2019ರ ಪೂರಕ ಪರೀಕ್ಷೆ ಶುಲ್ಕವನ್ನು ನಿಗಧಿತ ದಿನಾಂಕ 30.04.2019 ರೊಳಗಾಗಿ ಪಾವತಿಸುವುದು.
8. ಮಾರ್ಚ್–2019ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳ ಸ್ಕ್ಯಾನ್ಡ್ ಪ್ರತಿ ಪಡೆಯಲು ಮರು ಮೌಲ್ಯಮಾಪನ ಮತ್ತು ಮರುಎಣಿಕೆಗಾಗಿ ಅರ್ಜಿ ಸಲ್ಲಿಸುವ ಬಗ್ಗೆ ಇಲಾಖಾ website <u>pue.kär.nic.in</u>ನ ಅಂತರ್ಜಾಲದಲ್ಲಿ ವಿವರವಾದ ಸುತ್ತೋಲೆಯನ್ನು ಪ್ರಕಟಿಸಲಾಗಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರಿಗೆ – ಮಾಹಿತಿಗಾಗಿ ಹಾಗೂ ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.
2. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ. (ವಿದ್ಯಾರ್ಥಿಗಳಿಗೆ ಈ ಕುರಿತು ಸೂಕ್ತ ನಿರ್ದೇಶನ ನೀಡಲು)
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ.
4. ಗಣಕ ಶಾಖೆಗೆ.
5. ಇಲಾಖಾ ಇ–ಆಡಳಿತ ಶಾಖೆ, (ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು).
6. ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

E-mail:commissioner.pue@gmail.com.*ph:No.23361857,23361858.*Fax-23361852

ಸಂಖ್ಯೆ: ಪಪೂಶಿಇ/ಪರೀಕ್ಷೆ/ಮ.ವಿ.ಮಾ/2018-19 ದಿನಾಂಕ: 15.04.2019

## ಸುತ್ತೋಲೆ

ವಿಷಯ: 2019ರ ಜೂನ್ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಹಾಜರಾಗುವ ಪುನರಾವರ್ತಿತ ವಿದ್ಯಾರ್ಥಿಗಳ ಮಾಹಿತಿಯನ್ನು ಆನ್-ಲೈನ್ ಮೂಲಕ ಸಲ್ಲಿಸುವ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2019ರ ಜೂನ್ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಹಾಜರಾಗುವ ಪುನರಾವರ್ತಿತ ವಿದ್ಯಾರ್ಥಿಗಳ ಮಾಹಿತಿಯನ್ನು ಆನ್-ಲೈನ್ ಮೂಲಕ ಸಲ್ಲಿಸಲು ತಿಳಿಸಲಾಗಿದೆ.

ಪದವಿ ಪೂರ್ವ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲಾದ ಆನ್-ಲೈನ್ ಪೋರ್ಟಲ್‌ನಲ್ಲಿ ಪುನರಾವರ್ತಿತ ವಿದ್ಯಾರ್ಥಿಗಳ ಸಂಪೂರ್ಣ ನಿಖರ ಮಾಹಿತಿಗಳನ್ನು ಸದರಿ ವ್ಯವಸ್ಥೆಯಲ್ಲಿ ಕಡ್ಡಾಯವಾಗಿ ದಾಖಲಿಸಬೇಕು. ಸದರಿ ವ್ಯವಸ್ಥೆಯಲ್ಲಿ ದಾಖಲಿಸಿರುವ ವಿದ್ಯಾರ್ಥಿಗಳಿಗೆ ಮಾತ್ರ 2019ರ ಜೂನ್ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ.

ಪ್ರತಿ ಪುನರಾವರ್ತಿತ ವಿದ್ಯಾರ್ಥಿಯ ವೈಯಕ್ತಿಕ ಮಾಹಿತಿಯನ್ನು ದಾಖಲಿಸುವಲ್ಲಿ ಹಲವಾರು ಹಂತಗಳಿದ್ದು ಎಲ್ಲಾ ಹಂತಗಳಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಸಲ್ಲಿಸಿದಲ್ಲಿ ಮಾತ್ರ ವಿದ್ಯಾರ್ಥಿಯ ಮಾಹಿತಿ ವ್ಯವಸ್ಥೆಯಲ್ಲಿ ದಾಖಲಿಸಲ್ಪಡುತ್ತದೆ. ಈ ಸಂಬಂಧ ಪಾಲಿಸಬೇಕಾದ ಕ್ರಮಗಳನ್ನು ಹಾಗೂ ವಿದ್ಯಾರ್ಥಿಗಳ ವೈಯಕ್ತಿಕ ಮಾಹಿತಿಯನ್ನು ಭರ್ತಿ ಮಾಡುವಲ್ಲಿ ಈ ಕೆಳಗಿನಂತೆ ಹಂತಗಳನ್ನು ಸೂಚಿಸಿದೆ.

### ಹಂತ-1 : ಕಾಲೇಜು ನೋಂದಣಿ

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಂತರ್ಜಾಲದಲ್ಲಿ **pue.kar.nic.in**ನಲ್ಲಿ ತೋರಿಸಿರುವ PU On-line Portal ಲಿಂಕ್‌ನ್ನು ಆಯ್ಕೆ ಮಾಡಿಕೊಳ್ಳುವುದು.
2. PU On-line Portal ಲಿಂಕ್‌ನ್ನು ಆಯ್ಕೆ ಮಾಡಿ Enter Button ಒತ್ತುವುದು.

### ಹಂತ-2 : ಲಾಗಿನ್ (Login)

1. Login (Principal Login) ಮೇಲೆ Click ಮಾಡಿ ವಿವರಗಳನ್ನು ಭರ್ತಿ ಮಾಡಿ.
2. "Welcome to PUE On-line Portal" ಎಂದು ಬರುತ್ತದೆ.
3. ಈ ಪರದೆಯಲ್ಲಿ ತೋರಿಬರುವ Home page ನಲ್ಲಿರುವ Repeaters menu ವಿನ ಮೇಲೆ Click ಮಾಡುವುದು. ನಂತರ Student menu ವಿನ ಮೇಲೆ Click ಮಾಡಿದರೆ Entry ಮಾಡಬಹುದು.

### ಹಂತ-3 : ಮಾಹಿತಿಗಳನ್ನು ನೀಡುವುದು (Entering the Data)

1. ಮೂಡಿ ಬರುವ ಪರದೆಯಲ್ಲಿ ಸೂಚಿಸಿರುವ ಎಲ್ಲಾ ಮಾಹಿತಿಗಳನ್ನು (Repeater Candidates OMR) ರಲ್ಲಿ ಇರುವಂತೆ ತುಂಬುವುದು.
2. ಕೊನೆಯಲ್ಲಿ Submit ನ್ನು Click ಮಾಡುವುದು.

(8)

**ಹಂತ–4 : ಭಾವಚಿತ್ರ ಮತ್ತು ಸಹಿ ಸಲ್ಲಿಕೆ (Photo Upload)**

1. Photo Upload ನ್ನು Click ಮಾಡುವುದು.
2. ಈಗಾಗಲೇ ಸಿದ್ಧಪಡಿಸಿಕೊಂಡಿರುವ ವಿದ್ಯಾರ್ಥಿಯ Photo Scan ಮಾಡಿ (Template)ನ್ನು Upload ಮಾಡುವುದು.
3. Back to Student View Button ಮೇಲೆ Click ಮಾಡಿ.

**ಹಂತ–5 : ಸಲ್ಲಿಸಿದ ವಿದ್ಯಾರ್ಥಿಗಳ ವಿವರಗಳ ಚೆಕ್‌ಲಿಸ್ಟ್ ಪಡೆಯುವುದು.**

1. ಪರೀಕ್ಷಾ ಶುಲ್ಕ ಪಾವತಿಸಿದ ಎಲ್ಲಾ ವಿದ್ಯಾರ್ಥಿಗಳ ವಿವರವನ್ನು ಭರ್ತಿ ಮಾಡಿದ ಮೇಲೆ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ತಿಳಿದುಕೊಳ್ಳಲು Print Student Check List ಮೇಲೆ ಕ್ಲಿಕ್ ಮಾಡಿ.
2. ಎಲ್ಲಾ ವಿವರಗಳು ಸರಿ ಇದೆ ಎಂದು ಕಂಡುಬಂದ ನಂತರ, ಸದರಿ ಚೆಕ್‌ಲಿಸ್ಟ್ ಪ್ರತಿ ಯನ್ನು ವಿದ್ಯಾರ್ಥಿಗಳಿಂದ ದೃಢೀಕರಿಸಿ, ಅದರ ಪ್ರತಿಯನ್ನು ಇಲಾಖೆಗೆ ಸಲ್ಲಿಸುವುದು.

**ಹಂತ–6 : ಪ್ರಾಂಶುಪಾಲರು ಪರೀಕ್ಷಾ ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು.**

1. ಪ್ರಾಂಶುಪಾಲರು ಪರೀಕ್ಷಾ ಅರ್ಜಿಗಳನ್ನು Online Portal ನಲ್ಲಿ Update ಮಾಡಿರುವುದನ್ನು ಖಾತ್ರಿ ಪಡಿಸಿಕೊಂಡು, Update ಮಾಡಿರುವುದಕ್ಕೆ ಸಂಬಂಧಿಸಿದಂತೆ ಮುಚ್ಚಳಿಕೆ ಪತ್ರ, ಕಾಲೇಜುವಾರು ಕ್ರೋಢಿಕೃತ ವಿದ್ಯಾರ್ಥಿಗಳ ಪಟ್ಟಿ, ಹಣ ಪಾವತಿಸಿರುವ ಮೂಲ ಚಲನ್ ಹಾಗೂ ಇತರೆ ಎಲ್ಲ ಪೂರಕ ದಾಖಲೆಗಳೊಂದಿಗೆ **ಖುದ್ದಾಗಿ** ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸಬೇಕಾದ **ದಿನಾಂಕ 04.05.2019.**

ವಿದ್ಯಾರ್ಥಿಯ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಭರ್ತಿಮಾಡಿ ಸಲ್ಲಿಸುವ ಮುಂಚೆ ಪ್ರಾಚಾರ್ಯರು ನಿಖರ ದಾಖಲೆಗಳೊಂದಿಗೆ ಪರಿಶೀಲಿಸುವುದು ಕಡ್ಡಾಯವಾಗಿದೆ. ಮಾಹಿತಿ ಸಲ್ಲಿಕೆ ತಪ್ಪಾದಲ್ಲಿ ಪ್ರವೇಶ ಪತ್ರ ನೀಡುವಲ್ಲಿ ತೊಂದರೆಯಾಗುವುದು ಹಾಗೂ ಈ ರೀತಿಯ ತಪ್ಪುಗಳಿಗೆ ನೇರವಾಗಿ ಪ್ರಾಶುಪಾಲರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರಿಗೆ – ಮಾಹಿತಿಗಾಗಿ ಹಾಗೂ ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.
2. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ. (ವಿದ್ಯಾರ್ಥಿಗಳಿಗೆ ಈ ಕುರಿತು ಸೂಕ್ತ ನಿರ್ದೇಶನ ನೀಡಲು)
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ.
4. ಗಣಕ ಶಾಖೆಗೆ.
5. ಇಲಾಖಾ ಇ–ಆಡಳಿತ ಶಾಖೆ, (ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು).
6. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–12.**

ಸಂಖ್ಯೆ: ಪಪೂಶಿಇ/ಪರೀಕ್ಷೆ/ಭಾ.ನ್ಯೂ/2018–19. ದಿನಾಂಕ: 15.04.2019.

**ಜ್ಞಾಪನ**

ವಿಷಯ: ಮಾರ್ಚ್–2019ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳ ಭಾವಚಿತ್ರದಲ್ಲಿರುವ ನ್ಯೂನತೆಯ ಬಗ್ಗೆ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾರ್ಚ್ 2019ರ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗಿರುವ ವಿದ್ಯಾರ್ಥಿಗಳ ಮಾಹಿತಿಯನ್ನು (ವಿದ್ಯಾರ್ಥಿಯ ಹೆಸರು, ತಂದೆ ತಾಯಿಯ ಹೆಸರು SSLC ಅಂಕಪಟ್ಟಿಯಲ್ಲಿರುವಂತೆ ವಿದ್ಯಾರ್ಥಿ ತೆಗೆದುಕೊಂಡಿರುವ ಸಂಯೋಜನೆ, ಭಾಷಾ ಹಾಗೂ ವಿಷಯಗಳು, ಮಾಧ್ಯಮ) ಭಾವಚಿತ್ರ ಇತ್ಯಾದಿಗಳನ್ನು ಪ್ರಾಂಶುಪಾಲರೇ ಖುದ್ದಾಗಿ ಪರಿಶೀಲಿಸಿ ನ್ಯೂನತೆಗಳಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ ದಿನಾಂಕ 28.02.2019 ನಿಗಧಿಗೊಳಿಸಿ ಕೇಂದ್ರ ಕಛೇರಿಯನ್ನು ಸಂಪರ್ಕಿಸಲು ಸೂಚಿಸಲಾಗಿತ್ತು.

ಆದರೆ ಈಗಲೂ ಸಹ ವಿದ್ಯಾರ್ಥಿಗಳ ಭಾವಚಿತ್ರಗಳಲ್ಲಿ ನ್ಯೂನತೆಯಿರುವ ಬಗ್ಗೆ ಇಲಾಖೆಗೆ ದೂರುಗಳು ಬಂದಿರುತ್ತದೆ. ಈ ನ್ಯೂನತೆಗಳು ಅಂಕಪಟ್ಟಿಯಲ್ಲಿಯೂ ಸಹ ಮುಂದುವರೆದು ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಸಮಸ್ಯೆಯನ್ನು ಸೃಷ್ಟಿಸುತ್ತದೆ. ಈ ಹಿನ್ನೆಲೆಯಲ್ಲಿ ಇಲಾಖೆಯು ನ್ಯೂನತೆಗಳನ್ನು ಸರಿಪಡಿಸಲು ಕೊನೆಯ ಅವಕಾಶ ನೀಡುತ್ತಿದ್ದು, ಇಲಾಖಾ Online Portalನ್ನು ದಿನಾಂಕ 16.04.2019 ರಿಂದ 30.04.2019 ರವರೆಗೆ ತೆರೆಯುತ್ತಿದ್ದು, ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ತೇರ್ಗಡೆಯಾದ ಎಲ್ಲಾ ವಿದ್ಯಾರ್ಥಿಗಳ ಭಾವಚಿತ್ರಗಳನ್ನು ಪ್ರಾಂಶುಪಾಲರೇ ಖುದ್ದಾಗಿ ಪರಿಶೀಲಿಸಿ ಸರಿಪಡಿಸಲು ಅವಕಾಶ ನೀಡಿದೆ. ವಿದ್ಯಾರ್ಥಿಗಳ ಮಾಹಿತಿಗಳಲ್ಲಿ ನ್ಯೂನತೆಗಳಿದ್ದಲ್ಲಿ ದಿನಾಂಕ 30.04.2019 ರೊಳಗೆ ಪ್ರಾಂಶುಪಾಲರೇ ಖುದ್ದಾಗಿ ವಿದ್ಯಾರ್ಥಿಗಳ ಪೂರಕ ದಾಖಲೆಗಳೊಂದಿಗೆ ಇಲಾಖೆಯನ್ನು ಸಂಪರ್ಕಿಸಲು ಸೂಚಿಸಿದೆ.

ಭಾವಚಿತ್ರಗಳಲ್ಲಿ ನ್ಯೂನತೆಗಳಿದ್ದಲ್ಲಿ ಇತ್ತೀಚಿನ ಭಾವಚಿತ್ರವನ್ನು Scan ಮಾಡಿ Online Portal ನಲ್ಲಿ ಅಳವಡಿಸಲು ಸೂಚಿಸಿದೆ. ಮೇ ತಿಂಗಳ ಅಂತ್ಯದೊಳಗೆ ತೇರ್ಗಡೆಯಾದ ಎಲ್ಲಾ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ವಿತರಿಸಲು ಕ್ರಮಕೈಗೊಳ್ಳಲಾಗುತ್ತಿದೆ. ನಿಗಧಿತ ದಿನಾಂಕದೊಳಗೆ ನ್ಯೂನತೆಗಳನ್ನು ಸರಿಪಡಿಸದಿದ್ದಲ್ಲಿ ಮುಂದಿನ ಎಲ್ಲಾ ಆಗುಹೋಗುಗಳಿಗೆ ಪ್ರಾಂಶುಪಾಲರೇ ಸಂಪೂರ್ಣ ಜವಾಬ್ದಾರಾಗಿರುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಂಶುಪಾಲರುಗಳು ಈ ಕೆಳಕಂಡ ಪರೀಕ್ಷಾ ಶಾಖೆಯ ಅಧೀಕ್ಷಕರುಗಳನ್ನು ಸಂಪರ್ಕಿಸಲು ಸೂಚಿಸಿದೆ.

| ಕ್ರ. ಸಂ. | ಅಧೀಕ್ಷಕರುಗಳ ವಿವರ | ಮೊಬೈಲ್ ಸಂಖ್ಯೆ | ಜಿಲ್ಲೆಗಳು |
|---|---|---|---|
| 1. | ಶ್ರೀ ಸಿಂಜಾಪ್ ಅಧೀಕ್ಷಕರು (ಪರೀಕ್ಷೆ) | 9449327820 | ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ ರಾಮನಗರ, ತುಮಕೂರು, ಕೋಲಾರ, ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ ಮತ್ತು ಚಿಕ್ಕಬಳ್ಳಾಪುರ |
| 2. | ಶ್ರೀ ಪರಶಿವಪ್ಪ ಅಧೀಕ್ಷಕರು (ಪರೀಕ್ಷೆ) | 9916902726 | ಮೈಸೂರು, ಚಾಮರಾಜನಗರ, ಕೊಡಗು, ಮಂಗಳೂರು, ಉಡುಪಿ, ಮಂಡ್ಯ, ಹಾಸನ ಮತ್ತು ಚಿಕ್ಕಮಗಳೂರು, |
| 3. | ಶ್ರೀಮತಿ ರಾಧಮ್ಮ ಅಧೀಕ್ಷಕರು (ಪರೀಕ್ಷೆ) | 9731058549 | ಬೆಳಗಾಂ, ಚಿಕ್ಕೋಡಿ, ಧಾರವಾಡ, ಬಾಗಲಕೋಟೆ, ಗದಗ್, ಹಾವೇರಿ, ಬಿಜಾಪುರ ಮತ್ತು ಕಾರವಾರ. |
| 4. | ಶ್ರೀ ಮಹಮದ್ ನೂರ್‌ವುಲ್ಲಾ ಅಧೀಕ್ಷಕರು (ಪರೀಕ್ಷೆ) | 9448681040 | ಕಲ್ಬುರ್ಗಿ, ಯಾದಗಿರಿ, ಕೊಪ್ಪಳ, ಬಳ್ಳಾರಿ, ಬೀದರ್ ಮತ್ತು ರಾಯಚೂರು. |

**PHOTO ಬದಲಾವಣೆಗಾಗಿ ON-LINE PORTAL ಬಗ್ಗೆ ವಿಚಾರಣೆಗಾಗಿ :**

| ಕ್ರಮ ಸಂಖ್ಯೆ | ಅಧಿಕಾರಿ / ಸಿಬ್ಬಂದಿಯ ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1. | ಶ್ರೀಮತಿ ಸುಮಯ್ಯಾ ತಾಜ್, ಶಾಖಾಧಿಕಾರಿ, | 9731863274 |
| 2. | ಶ್ರೀ ಧನಂಜಯ, ಕೆ.ಆರ್ ಶಾಖಾಧಿಕಾರಿ, | 9980556733 |
| 3. | ಶ್ರೀ ಬಾಲಾಜಿ ಪಿ. ವೈ, ದ್ವಿ.ದ.ಸ. | 8892562073 |

**ದಿನಾಂಕ: 30.04.2019ರ ನಂತರ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.**

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರಿಗೆ – ಮಾಹಿತಿಗಾಗಿ ಹಾಗೂ ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.
2. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ. (ವಿದ್ಯಾರ್ಥಿಗಳಿಗೆ ಈ ಕುರಿತು ಸೂಕ್ತ ನಿರ್ದೇಶನ ನೀಡಲು)
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ.
4. ಗಣಕ ಶಾಖೆಗೆ.
5. ಇಲಾಖಾ ಇ–ಆಡಳಿತ ಶಾಖೆ, (ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು).
6. ಕಚೇರಿ ಪ್ರತಿ.

(11)

**GOVERNMENT OF KARNATAKA**
**DEPARTMENT OF PRE UNIVERSITY EDUCATION, SAMPIGE ROAD, 18TH CROSS, MALLESWARAM, BANGALORE-12**

No: PUE/EXAM/S.T.T/2018-19 DATE:15 .04.2019

## II PUC SUPPLEMENTARY EXAMINATION JUNE 2019 TIME TABLE

| DATE AND DAY OF EXAMINATION | MORNING SESSION 10:15 AM TO 01:30 PM | SUB CODE | AFTER NOON SESSION 2:30 PM TO 5:45 PM | SUB CODE |
|---|---|---|---|---|
| **07-06-2019** FRIDAY | SOCIOLOGY<br>ACCOUNTANCY<br>MATHEMATICS | 28<br>30<br>35 | | |
| **08-06-2019** SATURDAY | ENGLISH | 02 | INFORMATION TECHNOLOGY } NSQF<br>RETAIL } NSQF<br>AUTO MOBILE } NSQF<br>HEALTH CARE } NSQF<br>BEAUTY & WELLNES | 61<br>62<br>63<br>64<br>65 |
| **09-06-2019 - SUNDAY – HOLIDAY** | | | | |
| **10-06-2019** MONDAY | ECONOMICS<br>PHYSICS | 22<br>33 | | |
| **11-06-2019** TUESDAY | HINDI | 03 | TAMIL<br>TELUGU<br>MALAYALAM<br>MARATHI<br>ARABIC<br>FRENCH | 04<br>05<br>06<br>07<br>11<br>12 |
| **12-06-2019** WEDNESDAY | KANNADA | 01 | GEOGRAPHY<br>HINDUSTANI MUSIC<br>GEOLOGY | 24<br>26<br>37 |
| **13-06-2019** THURDAY | POLITICAL SCIENCE | 29 | | |
| **14-06-2019** FRIDAY | HISTORY<br>STATISTICS<br>BIOLOGY | 21<br>31<br>36 | | |
| **15-06-2019** SATURDAY | BUSINESS STUDIES<br>CHEMISTRY<br>EDUCATION | 27<br>34<br>52 | | |
| **16-06-2019 - SUNDAY – HOLIDAY** | | | | |
| **17-06-2019** MONDAY | URDU<br>SANSKRIT | 08<br>09 | OPTIONAL KANNADA | 16 |
| **18-06-2019** TUESDAY | ELECTRONICS<br>COMPUTER SCIENCE | 40<br>41 | LOGIC<br>PSYCHOLOGY<br>HOME SCIENCE<br>BASIC MATHS | 23<br>32<br>67<br>75 |

**C. SHIKHA., I.A.S.,**
Director,
Dept. of Pre-University Education

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12

ಸಂಖ್ಯೆ: ಪಪೂಶಿ/ಪರೀಕ್ಷೆ/ಪೂ.ವೇ.ಪ/2018-19 ದಿನಾಂಕ:15.04.2019

## ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ಜೂನ್ 2019ರ ವೇಳಾಪಟ್ಟಿ

| ಪರೀಕ್ಷಾ ದಿನ ಹಾಗೂ ದಿನಾಂಕ | ಬೆಳಗಿನ ವೇಳೆ 10-15 ರಿಂದ 01-30 ರವರೆಗೆ | ವಿಷಯ ಸಂಕೇತ | ಮಧ್ಯಾಹ್ನದ ವೇಳೆ 2-30 ರಿಂದ 5-45 ರವರೆಗೆ | ವಿಷಯ ಸಂಕೇತ |
|---|---|---|---|---|
| **07-06-2019**<br>ಶುಕ್ರವಾರ | ಸಮಾಜಶಾಸ್ತ್ರ<br>ಲೆಕ್ಕಶಾಸ್ತ್ರ<br>ಗಣಿತ | 28<br>30<br>35 | | |
| **08-06-2019**<br>ಶನಿವಾರ | ಇಂಗ್ಲೀಷ್ | 02 | ಮಾಹಿತಿ ತಂತ್ರಜ್ಞಾನ<br>ರೀಟೇಲ್<br>ಆಟೋಮೊಬೈಲ್<br>ಹೆಲ್ತ್‌ಕೇರ್<br>ಬ್ಯೂಟಿ ಮತ್ತು ವೆಲ್‌ನೆಸ್<br>} NSQF | 61<br>62<br>63<br>64<br>65 |
| **09-06-2019 - ಭಾನುವಾರ - ರಜಾದಿನ** | | | | |
| **10-06-2019**<br>ಸೋಮವಾರ | ಅರ್ಥಶಾಸ್ತ್ರ<br>ಭೌತಶಾಸ್ತ್ರ | 22<br>33 | | |
| **11-06-2019**<br>ಮಂಗಳವಾರ | ಹಿಂದಿ | 03 | ತಮಿಳು<br>ತೆಲುಗು<br>ಮಲಯಾಳಂ<br>ಮರಾಠಿ<br>ಅರೇಬಿಕ್<br>ಫ್ರೆಂಚ್ | 04<br>05<br>06<br>07<br>11<br>12 |
| **12-06-2019**<br>ಬುಧವಾರ | ಕನ್ನಡ | 01 | ಭೂಗೋಳಶಾಸ್ತ್ರ<br>ಹಿಂದೂಸ್ಥಾನಿ ಸಂಗೀತ<br>ಭೂಗರ್ಭಶಾಸ್ತ್ರ | 24<br>26<br>37 |
| **13-06-2019**<br>ಗುರುವಾರ | ರಾಜ್ಯಶಾಸ್ತ್ರ | 29 | | |
| **14-06-2019**<br>ಶುಕ್ರವಾರ | ಇತಿಹಾಸ<br>ಸಂಖ್ಯಾಶಾಸ್ತ್ರ<br>ಜೀವಶಾಸ್ತ್ರ | 21<br>31<br>36 | | |
| **15-06-2019**<br>ಶನಿವಾರ | ವ್ಯವಹಾರ ಅಧ್ಯಯನ<br>ರಸಾಯನಶಾಸ್ತ್ರ<br>ಶಿಕ್ಷಣ | 27<br>34<br>52 | | |
| **16-06-2019 - ಭಾನುವಾರ - ರಜಾದಿನ** | | | | |
| **17-06-2019**<br>ಸೋಮವಾರ | ಉರ್ದು<br>ಸಂಸ್ಕೃತ | 08<br>09 | ಐಚ್ಛಿಕ ಕನ್ನಡ | 16 |
| **18-06-2019**<br>ಮಂಗಳವಾರ | ಎಲೆಕ್ಟ್ರಾನಿಕ್ಸ್<br>ಕಂಪ್ಯೂಟರ್ ಸೈನ್ಸ್ | 40<br>41 | ತರ್ಕಶಾಸ್ತ್ರ<br>ಮನಃಶಾಸ್ತ್ರ<br>ಗೃಹವಿಜ್ಞಾನ<br>ಬೇಸಿಕ್ ಮ್ಯಾಥ್ಸ್ | 23<br>32<br>67<br>75 |

ಸಿ. ಶಿಖಾ ಭಾ.ಆ.ಸೇ.,
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ